OS No. 89/2018 PW-**1**

**ದಿನಾಂಕ 16.08.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :2 ನೇ ಮತ್ತು 4 ನೇ ಪ್ರತಿವಾದಿ ಪರ ವಕೀಲರಿಂದ :**

2 ನೇ ಮತ್ತು 4 ನೇ ಪ್ರತಿವಾದಿ ಮತ್ತು ಅವರುಗಳ ಪರ ವಕೀಲರು ಗೈರು ಹಾಜರಾಗಿದ್ದು, ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲು :3 ನೇ ಪ್ರತಿವಾದಿ ಪರ ವಕೀಲರಿಂದ :**

ನನ್ನ ಹೆಂಡತಿ ವೀಣಾರವರು ಜಯಮಹಲ್ ಎಕ್ಸ್‌ಟೆನ್ಷನ್ , ನಂಬರ್ 6, 4 ನೇ ಮುಖ್ಯ ರಸ್ತೆಯಲ್ಲಿ ಬೆಂಗಳೂರಿನಲ್ಲಿರುವ ಮನೆಯ 2 ನೇ ಮಹಡಿಯನಲ್ಲಿ ವಾಸ ಮಾಡಿಕೊಂಡಿದ್ದಾರೆ, ವಾದಿಯ ತಂದೆ, ತಾಯಿ ಮತ್ತು 3 ನೇ ಪ್ರತಿವಾದಿ ಅಂದರೆ ಪ್ರತಿವಾದಿ 2 ಮತ್ತು 4 ರವರು ಅದೇ ಮನೆಯ ಮೊದಲನೇ ಮಹಡಿಯಲ್ಲಿ ವಾಸ ಮಾಡಿಕೊಂಡಿದ್ದಾರೆ. ಸದರಿ ಸಂಪೂರ್ಣ ಸ್ವತ್ತು 2 ನೇ ಪ್ರತಿವಾದಿಯವರಿಗೆ ಸೇರಿದಂತಹ ಸ್ವತ್ತಾಗಿರುತ್ತದೆ. ಸದರಿ ಸ್ವತ್ತಿನಲ್ಲಿ 2 ನೇ ಮಹಡಿಯ ಸ್ವತ್ತನ್ನು ವಾದಿಗೆ, ಮೊದಲನೇ ಮಹಡಿಯ ಸ್ವತ್ತನ್ನು 4 ನೇ ಪ್ರತಿವಾದಿಗೆ 2 ನೇ ಪ್ರತಿವಾದಿಯವರು ದಾನ ಪತ್ರಗಳ ಮುಖಾಂತರ ಬರೆದುಕೊಟ್ಟಿರುತ್ತಾರೆಂದರೆ ಹೌದು. ಅದೇ ಸ್ವತ್ತಿನ ನೆಲಮಹಡಿಯನ್ನು 3 ನೇ ಪ್ರತಿವಾದಿಗೆ 2 ನೇ ಪ್ರತಿವಾದಿಯವರು ದಾನ ಪತ್ರದ ಮುಖಾಂತರ ಬರೆದುಕೊಟ್ಟಿರುತ್ತಾರೆಂದರೆ ಹೌದು. ಈ ಮೇಲೆ ಹೇಳಿದ ಎಲ್ಲಾ ದಾನ ಪತ್ರಗಳು ದಿ:22.12.2014 ರಂದು ಆಗಿರುತ್ತದೆ ಎಂದರೆ ಹೌದು. ನನ್ನ ಹೆಂಡತಿ ವೀಣಾ ಅಂದರೆ ವಾದಿ, 4 ನೇ ಮತ್ತು 5 ನೇ ಪ್ರತಿವಾದಿಯವರು ಹೆಚ್ಚಿನ ವಿದ್ಯಾಭ್ಯಾಸ ಹೊಂದಿರುತ್ತಾರೆಂದರೆ ಅವರು ವಿದ್ಯಾವಂತರಾಗಿರುತ್ತಾರೆ ಆದರೆ ವಾದಿ ಮತ್ತು 3 ನೇ ಪ್ರತಿವಾದಿಯವರು ವಿದ್ಯಾವಂತರಾಗಿರುತ್ತಾರೆ ಆದರೆ ಹೆಚ್ಚಿನ ವಿದ್ಯಾಭ್ಯಾಸ ಹೊಂದಿರುತ್ತಾರೋ ಇಲ್ಲವೋ ಎಂದು ಗೊತ್ತಿಲ್ಲ. 4 ನೇ ಪ್ರತಿವಾದಿ ಎಂ.ಬಿ.ಬಿ.ಎಸ್., ಎಂ.ಡಿ ಮಾಡಿರುತ್ತಾರೆ ಮತ್ತು ಎಂ ಎಸ್ ರಾಮಯ್ಯದಲ್ಲಿ ಪ್ರೊಫೇಸರ್ ಆಗಿರುತ್ತಾರೆ. ಈ ದಾವೆ ಸಲ್ಲಿಸಿದ ನಂತರ ನನ್ನ ಹೆಂಡತಿ ಹಲವಾರು ಬಾರಿ ನ್ಯಾಯಾಲಯಕ್ಕೆ

ಬಂದಿರುತ್ತಾರೆಂದರೆ ಹಲವಾರು ಬಾರಿ ಬಂದಿಲ್ಲ 2 ಬಾರಿ ಬಂದಿರುತ್ತಾರೆ. ನನ್ನ ಹೆಂಡತಿ ಯಾವುದೇ ನೌಕರಿಯಲ್ಲಿ ಇಲ್ಲ. ನನ್ನ ಹೆಂಡತಿ 3 ನೇ ಪ್ರತಿವಾದಿಯ ವಿರುದ್ದ ಲಿಪ್ಟ್ ಹಾಕಬೇಕು ಎನ್ನುವ ವಿಚಾರಕ್ಕೆ  ಒ ಎಸ್ ಸಂಖ್ಯೆ 4664/2021 ಅನ್ನು ಬೆಂಗಳೂರಿನ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆಂದರೆ ಹೌದು ಸಾಕ್ಷಿ ಅದಕ್ಕೂ ಮೊದಲು 3 ನೇ ಪ್ರತಿವಾದಿಯವರು ನನ್ನ ಹೆಂಡತಿಯ ವಿರುದ್ದ ಮತ್ತು 4 ನೇ ಪ್ರತಿವಾದಿಯ ವಿರುದ್ದ ಒ ಎಸ್ ಸಂಖ್ಯೆ 779/2019 ಅನ್ನು ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿದ ಎರಡೂ ಕೇಸುಗಳನ್ನು ನನ್ನ ಹೆಂಡತಿಯು ನಿಯಮಿತವಾಗಿ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆಂದರೆ ಇಲ್ಲ ಒಂದೆರಡು ಬಾರಿ ಹೋಗಿರಬಹುದು. ನನ್ನ ಹೆಂಡತಿಯಾದ ವಾದಿಗೆ ನ್ಯಾಯಾಲಯಕ್ಕೆ ಬರಲು ತೊಂದರೆ ಇಲ್ಲ ಎಂದರೆ ಸರಿಯಲ್ಲ ಅವರಿಗೆ ಮೈಗ್ರೇನ್ ಇದೆ, ತಲೆಸುತ್ತು ಇದೆ ಲಾಂಗ್ ಡಿಸ್ ಟೆನ್ಸ್ ಪ್ರಯಾಣ ಮಾಡಲು ಸಾಧ್ಯವಿಲ್ಲ. ವಾದಿಗೆ ಯಾವುದೇ ತೊಂದರೆ ಇಲ್ಲ ನಾನು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಗೆ ಮೈಗ್ರೇನ್ ಇದೆ, ತಲೆಸುತ್ತು ಇದೆ ಎನ್ನುವ ಬಗ್ಗೆ ನಾನು ದಾಖಲೆಯನ್ನು ಕೊಟ್ಟಿಲ್ಲ ಕಾರಣ ಆ ಬಗ್ಗೆ ದಾಖಲೆ ಇರುವುದಿಲ್ಲ. ನನ್ನ ಹೆಂಡತಿಸತ್ಯ ಹೊರಗೆ ಬೀಳುತ್ತದೆ ಎನ್ನುವ ಕಾರಣಕ್ಕೆ ಬೇಕಂತಲೇ ನ್ಯಾಯಾಲಯಕ್ಕೆ ಬರುವುದನ್ನು ತಪ್ಪಿಸಿಕೊಳ್ಳುತ್ತಿದ್ದಾರೆಂದರೆ ಸರಿಯಲ್ಲ.

2. ನನ್ನ ಮಾವರವರು ಅಂದರೆ ಮೃತ 1 ನೇ ಪ್ರತಿವಾದಿ ಹೆಚ್ ಎಂ ಟಿ ಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ನಿವೃತ್ತರಾಗುವಾಗ ಜನರಲ್ ಮ್ಯಾನೇಜರ್ ಆಗಿದ್ದರು. ಮೃತ 1 ನೇ ಪ್ರತಿವಾದಿಯವರು ಹೆಚ್ ಎಂ ಟಿಯಲ್ಲಿ ಹಿರಿಯ ಅಧಿಕಾರಿಯಾಗಿದ್ದು ಅವರಿಗೆ ಒಳ್ಳೆಯ ಹೆಸರಿತ್ತು ಎಂದರೆ ಹೌದು. ಮೃತ 1 ನೇ ಪ್ರತಿವಾದಿಯವರಿಗೆ ಇಬ್ಬರು ಸಹೋದರರು ಇದ್ದು ಅವರುಗಳೆಂದರೆ ಟಿ. ರಾಮಚಂದ್ರ ಮತ್ತು ಟಿ. ಶಶಿಕುಮಾರ್ ಎಂದರೆ ಹೌದು. ಮೃತ 1 ನೇ ಪ್ರತಿವಾದಿಯ ತಾಯಿಯ ಹೆಸರು ತಾಯಮ್ಮ.  ಮೃತ 1 ನೇ ಪ್ರತಿವಾದಿ ಮತ್ತು ಅವರ ಸಹೋದರರಿಗೆ ಅವರ ತಂದೆಯಿಂದ ಮಂಗಳವಾರಪೇಟೆ , ಕಸಬಾ ಹೋಬಳಿ ಚನ್ನಪಟ್ಟಣ ಟೌನ್ ನಲ್ಲಿ ಸರ್ವೆನಂಬರ್ 76/1, 74/2, 75,76, 164/2 ಮತ್ತು 3/2 ರ ವ್ಯವಸಾಯದ ಜಮೀನುಗಳು ಬಂದಿತ್ತು ಎಂದರೆ ನನಗೆ ಆ ಬಗ್ಗೆ ಹೆಚ್ಚಿನ ತಿಳುವಳಿಕೆ ಇಲ್ಲ ಆದರೆ  ಸರ್ವೆ ನಂಬರ್ 76/1 ರ ಆಸ್ತಿ ಮತ್ತು 4 ನಿವೇಶನಗಳು 1 ನೇ ಪ್ರತಿವಾದಿಗೆ ಬಂದಂತಹ ವಿಷಯ

ಗೊತ್ತಿದೆ. ಈ ಮೇಲೆ ಹೇಳಿದ ಜಮೀನುಗಳನ್ನು ಹೊರತುಪಡಿಸಿ ಮುನ್ಸಿಪಾಲಿಟಿ ಖಾತೆಗೆ ಸೇರಿದಂತಹ 1911 ಮತ್ತು 1915 ರ ಸೈಟುಗಳು ಕೂಡ ಅವರಿಗೆ 1 ನೇ ಪ್ರತಿವಾದಿ ಮತ್ತು ಅವರ ಸಹೋದರರಿಗೆ ಇತ್ತು ಎಂದರೆ ಹೌದು. ಮೃತ 1 ನೇ ಪ್ರತಿವಾದಿ ಮತ್ತು ಅವರ ಸಹೋದರರ ಮತ್ತು ಅವರ ಕುಟುಂಬದ ಸದಸ್ಯರ ಮತ್ತು ಅವರ 1 ನೇ ಪ್ರತಿವಾದಿಯ ತಾಯಿ ತಾಯಮ್ಮ ರವರ ನಡುವೆ ಪಂಚಾಯತಿದಾರರ ತೀರ್ಮಾನದಂತೆ ವಿಭಾಗವಾಗಿರುತ್ತದೆಂದರೆ ಹೌದು. ಆ ರೀತಿ ಆದಂತಹ ವಿಭಾಗದಲ್ಲಿ ಮುನ್ಸಿಪಾಲ್ ಖಾತಾ ನಂಬರ್ 1915/7 ರ ನಿವೇಶನದಲ್ಲಿ ನನ್ನ ಹೆಂಡತಿ ವೀಣಾ ರವರಿಗೆ 12/18 ಮೀಟರ್ ಅಳತೆಯ ಸೈಟು ಬಂದಿರುತ್ತದೆಂದರೆ ಹೌದು. ಆ ರೀತಿ ಆದಂತಹ ವಿಭಾಗದಲ್ಲಿ ಮುನ್ಸಿಪಾಲ್ ಖಾತಾ ನಂಬರ್ 1915/3 ರ ನಿವೇಶನ 3 ನೇ ಪ್ರತಿವಾದಿ ಸುಜಯ್ ಶ್ರೀ ಸುಮಂತ್ ರವರಿಗೆ ಬಂದಿರುತ್ತದೆ ಎಂದರೆ ಹೌದು. ಆ ರೀತಿ ಆದಂತಹ ವಿಭಾಗದಲ್ಲಿ ಮುನ್ಸಿಪಾಲ್ ಖಾತಾ ನಂಬರ್ 1915/4 ರ ನಿವೇಶನ 4 ನೇ ಪ್ರತಿವಾದಿಗೆ ಬಂದಿರುತ್ತದೆಂದರೆ ಹೌದು. ನನ್ನ ಅತ್ತೆಯವರಿಗೆ ಅಂದರೆ 2 ನೇ ಪ್ರತಿವಾದಿಗೆ 1915/8 ರ ನಿವೇಶನ ಬಂದಿರುತ್ತದೆಂದರೆ ಹೌದು. ಅದೇ ವಿಭಾಗದಲ್ಲಿ ಸರ್ವೆ ನಂಬರ್ 76/1 ರಲ್ಲಿ ಮಂಗಳವಾರಪೇಟೆ ಗ್ರಾಮದ 1 ಎಕರೆ 7 ಗುಂಟೆ ಜಮೀನು 1 ನೇ ಪ್ರತಿವಾದಿಗೆ ಬಂದಿರುತ್ತದೆಂದರೆ ಇಲ್ಲ ಅದು ಒಟ್ಟು ಕುಟುಂಬಕ್ಕೆ ಸೇರಿದ್ದು. ಅದೇ ರೀತಿ ರಾಮಚಂದ್ರ ಮತ್ತು ಅವರ ಹೆಂಡತಿ ಮಕ್ಕಳು ಶಶಿಕುಮಾರ್ ಮತ್ತು ಅವರ ಹೆಂಡತಿ ಮತ್ತು ಮಕ್ಕಳಿಗೂ ಕೂಡ ವಿಭಾಗದಲ್ಲಿ ಆಸ್ತಿಗಳು ಬಂದಿದೆ ಎಂದರೆ ಹೌದು. ತಾಯಮ್ಮರವರಿಗೂ ಕೂಡ ಒಂದು ಭಾಗ ಬಂದಿದ್ದು ಅವರು ಅವರ ಜೀವಿತ ಕಾಲದಲ್ಲಿ ಅವರಿಗೆ ಆನಂತರ ಸದರಿ ಆಸ್ತಿಯಲ್ಲಿ ಎಲ್ಲರಿಗೂ ಸಮಭಾಗ ಎಂದು ತೀರ್ಮಾನವಾಗಿರುತ್ತದೆ. ಆ ರೀತಿ ಆದಂತಹ ವಿಭಾಗದ ಬಗ್ಗೆ ದಿನಾಂಕ 20.10.1993 ರಂದು ಪಾಲು ಪಟ್ಟಿ ಮಾಡಿರುತ್ತಾರೆಂದರೆ ಹೌದು. ಆ ರೀತಿ ಮಾಡಿಕೊಂಡ ಪಾಲು ಪಟ್ಟಿಗೆ ಮೃತ 1 ನೇ ಪ್ರತಿವಾದಿ, 2 ರಿಂದ 4 ನೇಪ್ರತಿವಾದಿ ಮತ್ತು ವಾದಿಯವರು ಸಹಿ ಹಾಕಿರುತ್ತಾರೆಂದರೆ ಹೌದು ರಾಮಚಂದ್ರ ಮತ್ತು ಶಶಿಕುಮಾರ್ ರವರ ಕುಟುಂಬದವರೂ ಕೂಡ ಸಹಿ ಹಾಕಿರುತ್ತಾರೆ. ಸಾಕ್ಷಿಗೆ ದಿನಾಂಕ 20.10.1993 ರ ಪಾಲು ಪಟ್ಟಿಯ ಜೆರಾಕ್ಸ್ ಪ್ರತಿಯನ್ನು ತೋರಿಸಿದಾಗ ಅದನ್ನು ನೋಡಿ ಒಪ್ಪಿ ಸದರಿ ದಾಖಲೆಯ ಜೆರಾಕ್ಸ್ ಪ್ರತಿ ನನ್ನ ಬಳಿಯೂ ಇದೆ ಎಂದು ಹೇಳಿದ್ದರಿಂದ ಸದರಿ

ದಾಖಲೆಯನ್ನು ಗುರುತಿಸುವ ಸಲುವಾಗಿ (Identification purpose) ಸದರಿ ದಾಖಲೆಯನ್ನು **ನಿಡಿ-1 ಎಂದು ಗುರುತಿಸಲಾಯಿತು.** ವಾದಿ ಪರ ವಕೀಲರು ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಲು ತಕರಾರನ್ನು ವ್ಯಕ್ತ ಪಡಿಸಿರುತ್ತಾರೆ ಸದರಿ ತಕರಾರಿನ ಬಗ್ಗೆ ದಾವೆಯನ್ನು ಇತ್ಯರ್ಥ ಪಡಿಸುವ ಸಮಯದಲ್ಲಿ ನಿರ್ಧಾರ ಮಾಡುವ ಬಗ್ಗೆ ದಾವೆಯನ್ನು ಕಾಯ್ದಿರಿಸಿ ಸದರಿ ದಾಖಲೆಯನ್ನು ವಾದಿ ಪರ ವಕೀಲರ ಆಕ್ಷೇಪಣೆಗೆ ಒಳಪಡಿಸಿ ನಿಡಿ-1 ಎಂದು ಗುರುತಿಸಲಾಗಿದೆ. ಸದರಿ ದಾಖಲೆಯು ನೊಂದಾಯಿತವಲ್ಲದ ಮತ್ತು ಸೂಕ್ತ ಸ್ಟಾಂಪ್ ಶುಲ್ಕ ಪಾವತಿ ಆಗದ ಪೇಪರ್ ನಲ್ಲಿ ಮುದ್ರಿವಾದಂತಹ ಪಾಲು ಪಟ್ಟಿಯಾಗಿರುವುದರಿಂದ ಸದರಿ ದಾಖಲೆಯ ಬಗ್ಗೆ ಸ್ಟಾಂಪ್ ಡ್ಯೂಟಿ ಆ್ಯಂಡ್ ಪೆನಾಲ್ಟಿ ಯನ್ನು ಪಾವತಿಸಬೇಕಾಗುತ್ತದೆ ಎಂದು ವಾದಿ ಪರ ವಕೀಲರು ವಾದಿಸುತ್ತಾರೆ. 3 ನೇ ಪ್ರತಿವಾದಿ ಪರ ವಕೀಲರು ಸದರಿ ದಾಖಲೆಯು ಈ ಹಿಂದೆ ಕುಟುಂಬದಲ್ಲಿ ಆದಂತಹ ಮೌಖಿಕ ಪಂಚಾಯತಿ ವಿಭಾಗವನ್ನು ನಂತರದ ದಿನಾಂಕದಂದು ಲಿಖಿತ ರೂಪಕ್ಕೆ ಇಳಿಸಿದ್ದಾಗಿರುತ್ತದೆ ಆದ್ದರಿಂದ ಸದರಿ ದಾಖಲೆಗೆ ಸ್ಟಾಂಪ್ ಡ್ಯೂಟಿ ಆ್ಯಂಡ್ ಪೆನಾಲ್ಟಿ ಯನ್ನು ಪಾವತಿಸುವ ಅವಶ್ಯಕತೆ ಇಲ್ಲ ಎಂದು ವಾದಿಸುತ್ತಾರೆ. ಸದರಿ ದಾಖಲೆಯ ಒಕ್ಕಣೆಯನ್ನು ಗಮನಿಸಿದಾಗ ಈ ಹಿಂದೆ ಪಂಚಾಯತಿದಾರರ ಸಮಕ್ಷಮ ಆದಂತಹ ವಿಭಾಗವನ್ನು ನಂತರದ ದಿನಾಂಕದಲ್ಲಿ ಲಿಖಿತ ರೂಪಕ್ಕೆ ಇಳಿಸಿರುವುದು ಕಂಡು ಬರುತ್ತದೆ ಆದ್ದರಿಂದ ಸದರಿ ದಾಖಲೆಯು ಕೇವಲ ವಿಭಾಗದ ಪಾಲುಪಟ್ಟಿಯಾಗಿದ್ದು ಸದರಿ ದಾಖಲೆಗೆ ಸ್ಟಾಂಪ್ ಡ್ಯೂಟಿ ಆ್ಯಂಡ್ ಪೆನಾಲ್ಟಿ ಯನ್ನು ಪಾವತಿಸುವ ಅಗತ್ಯವಿಲ್ಲ ಎಂದು ಪರಿಗಣಿಸಲಾಯಿತು. ನಿಡಿ-1 ರ ಸಂಪೂರ್ಣ ದಾಖಲೆಯ ಬಗ್ಗೆ ನಮ್ಮದೇನು ತಕರಾರು ಇಲ್ಲ ಆದರೆ ಬೇರೆಯವರ ಬಗ್ಗೆ ಗೊತ್ತಿಲ್ಲ. ಮೃತ 1 ನೇ ಪ್ರತಿವಾದಿಯವರು ಈ ದಾವಾದಲ್ಲಿ ಸಲ್ಲಿಸಿದ ಲಿಖಿತ ತಕರಾರಿನ ಬಗ್ಗೆ ಗೊತ್ತಿದೆ. ಮೃತ 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಪರ ವಕೀಲರನ್ನು ನೇಮಕ ಮಾಡಿಕೊಂಡು ತಕರಾರನ್ನು ಸಲ್ಲಿಸಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯವರು ದಿನಾಂಕ 20.04.2021 ರಲ್ಲಿ ವಾದಿ ಮತ್ತು 4 ನೇ ಪ್ರತಿವಾದಿಗೆ ದಾನಪತ್ರ ಬರೆದುಕೊಟ್ಟಿರುತ್ತಾರೆಂದರೆ ಹೌದು. ಸಾಕ್ಷಿಗೆ ಸದರಿ ದಾನಪತ್ರವನ್ನು ತೋರಿಸಿದಾಗ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಡಿ-2 ಎಂದು ಗುರುತಿಸಲಾಯಿತು.** ಸದರಿ ಆಸಿಯನ್ನು ವಾದಿ ಮತ್ತು 4 ನೇ ಪ್ರತಿವಾದಿಯವರು

ಮಾರಾಟ ಮಾಡಿರುತ್ತಾರೆ. ಮೃತ 1 ನೇ ಪ್ರತಿವಾದಿ ದಿಃ07.06.2013 ರಲ್ಲಿ 4 ನೇ ಪ್ರತಿವಾದಿಗೆ ಸರ್ವೆನಂಬರ್ 74/2 ರಲ್ಲಿ 16 ಗುಂಟೆ ಜಮೀನನ್ನು ದಾನಪತ್ರ ಬರೆದುಕೊಟ್ಟಿರುತ್ತಾರೆಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಅದೇ ರೀತಿ ದಿಃ30.03.2015 ರಲ್ಲಿ ಮೃತ 1 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ನಿವೇಶನ 75/9 ಅನ್ನು ದಾನಪತ್ರದ ಮುಖಾಂತರ ಬರೆದುಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಈ ಮೇಲೆ ಹೇಳಿದ 2 ಪತ್ರಗಳು ಆಗುವ ಸಮಯದಲ್ಲಿ 2 ನೇ ಪ್ರತಿವಾದಿ ಮತ್ತು ವಾದಿ ತಮ್ಮ ಸಹಿಗಳನ್ನು ಹಾಕಿರುತ್ತಾರೆಂದರೆ ಅವರ ತಂದೆ ದಾಖಲೆ ತಂದು ಕೊಟ್ಟಾಗ ಸಹಿ ಹಾಕಿ ಕೊಟ್ಟಿರಬಹುದು ಆದರೆ ಸದರಿ ದಾಖಲೆ ದಾನ ಪತ್ರಗಳು ಎಂದು ಅವರಿಗೆ ಗೊತ್ತಿರದೇ ಇರಬಹುದು. ದಿಃ17.06.2013 ರಂದು 3 ನೇ ಪ್ರತಿವಾದಿ ಸುಜಯ್ ಶ್ರೀ ರವರಿಗೆ ಮೃತ 1 ನೇ ಪ್ರತಿವಾದಿಯವರು ದಾವಾ ಎ ಷಡ್ಯೂಲ್ ಸ್ವತ್ತಿನ ಬಗ್ಗೆ ದಾನ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಹೌದು. ಸದರಿ ದಿಃ17.06.2013 ರ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಅದನ್ನು **ನಿಡಿ-3 ಎಂದು ಗುರುತಿಸಲಾಯಿತು.**

3. ಶರಣ್‌ಶ್ರೀನಿವಾಸ್ ಎಂದರೆ ನನ್ನ ಮಗ. ನಿಡಿ-3 ರ ದಾನಪತ್ರಕ್ಕೆ 1 ನೇ ಪ್ರತಿವಾದಿ, ನನ್ನ ಹೆಂಡತಿ ವಾದಿ ಮತ್ತು 4 ನೇ ಪ್ರತಿವಾದಿ ವನಿತಾಗೌಡ ನನ್ನ ಮಗ ಶರಣ್ ಶ್ರೀನಿವಾಸ್ ರವರುಗಳು ಸಾಕ್ಷಿಯಾಗಿ ಸಹಿ ಹಾಕಿರುತ್ತಾರೆಂದರೆ ಸಾಕ್ಷಿ ಕೇವಲ ಕೊನೆಯ ಪುಟಕ್ಕೆ ಸಹಿ ಹಾಕಿಸಿರುತ್ತಾರೆ ಆದರೆ ದಾನಪತ್ರವೋ ಅಥವಾ ಬೇರೆ ಯಾವುದು ದಾಖಲೆ ಎಂದು ಅವರಿಗೆ ಗೊತ್ತಿರಲಿಲ್ಲ. ಸಾಕ್ಷಿಯು ನಿಡಿ-3 ರಲ್ಲಿರುವ ವೀಣಾ ಶ್ರೀನಿವಾಸ್ ಮತ್ತು ಶರಣ್‌ಶ್ರೀನಿವಾಸ್ ರವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ನಿಡಿ-3 ಎ) ಮತ್ತು ನಿಡಿ-3(ಬಿ) ಎಂದು ಗುರುತಿಸಲಾಯಿತು.ಕೊನೆಯ ಪುಟಕ್ಕೆ ಮಾತ್ರ ಸಹಿಯನ್ನು ತೆಗೆದುಕೊಂಡಿರುತ್ತಾರೆ ಆದರೆ ಸಂಪೂರ್ಣ ದಾಖಲೆಯನ್ನು ತೋರಿಸಿಲ್ಲ ಎನ್ನುವ ವಿಚಾರವನ್ನು ನನಗೆ ನನ್ನ ಹೆಂಡತಿ ಹೇಳಿರುತ್ತಾರೆ. ನಿಡಿ-3 ರ ದಾನಪತ್ರ ಮಾಡುವಂತಹ ಸಮಯದಲ್ಲಿ ಸದರಿ ಆಸ್ತಿಯ ಖಾತೆ ಮೃತ 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ 1 ನೇ ಪ್ರತಿವಾದಿ ಕುಟುಂಬದ ಮುಖ್ಯಸ್ಥರಾಗಿದ್ದ ಕಾರಣ ಅವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ.ಮೃತ 1 ನೇ ಪ್ರತಿವಾದಿ ಸದರಿ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಸಿಕೊಂಡಿದ್ದರು ಎಂದರೆ ಸದರಿ ದಾನಪತ್ರದ ಪ್ರಕಾರ ಆ ರೀತಿ ಇದೆ. ಸದರಿ 1

ಎಕರೆ ಜಮೀನಿನಲ್ಲಿ ಭೂ ಪರಿವರ್ತನೆ ಆದ ನಂತರ 1 ನೇ ಪ್ರತಿವಾದಿ ಲೇಔಟ್ ಮಾಡಿ 19 ಸೈಟುಗಳನ್ನು ನಿರ್ಮಾಣ ಮಾಡಿದ್ದರು ಎಂದು ಸದರಿ ದಾನಪತ್ರದ ಪ್ರಕಾರ ಆ ರೀತಿ ನಮೂದಾಗಿದೆ ಎಂದು ನುಡಿಯುತ್ತಾರೆ. ಸದರಿ 19 ಸೈಟುಗಳ ಬಗ್ಗೆ ತಿಟ್ಟಮಾರನಹಳ್ಳಿ ಗ್ರಾಮ ಪಂಚಾಯತಿನಲ್ಲಿ ಮೃತ 1 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿ ಅವರೇ ಸದರಿ ಸೈಟುಗಳಿಗೆ ಸಂಬಂದಪಟ್ಟಂತೆ ಕಂದಾಯ ಕಟ್ಟುತ್ತಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಮೃತ 1 ನೇ ಪ್ರತಿವಾದಿಯವರು ಸರ್ವೆ ನಂಬರ್ 76/4 ರಲ್ಲಿ 7 ಗುಂಟೆ ಜಮೀನನ್ನು ( ದಾವಾ ಬಿ ಷಡ್ಯೂಲ್ )3 ನೇ ಪ್ರತಿವಾದಿಗೆ ದಿಃ09.01.2017 ರಂದು ದಾನಪತ್ರ ಬರೆದುಕೊಟ್ಟಿರುತ್ತಾರೆಂದರೆ ಹೌದು. ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು **ನಿಡಿ-4 ಎಂದು ಗುರುತಿಸಲಾಯಿತು.** ದಾವಾ ಎ ಮತ್ತು ಬಿ ಷಡ್ಯೂಲ್ ಸ್ವತ್ತುಗಳ ಬಗ್ಗೆ 3 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿ ಅವರೇ ಕಂದಾಯ ಪಾವತಿ ಮಾಡಿಕೊಂಡು ಬರುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ ಮತ್ತು ಅದೇ ದಾಖಲೆಯನ್ನು ಪ್ರಶ್ನಿಸಿ ದಾವೆಯನ್ನು ಹಾಕಿರುತ್ತೇವೆ. ದಾವಾ ಎ ಮತ್ತು ಬಿ ಷಡ್ಯೂಲ್ ಸ್ವತ್ತುಗಳು 3 ನೇ ಪ್ರತಿವಾದಿಯ ಸ್ವಾದೀನದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ಶುಭಾ)

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.